ಓಃಎಸ್ಃನಂಃ**50/2016** ಪಿ.ಡಬ್ಲ್ಯುಃ **1**

<u>ದಿನಾಂಕಃ 25/05/2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-</u>

1957 ರ ವಿಭಾಗ ಪತ್ರ ಅಂದರೆ ನಿಪಿ1 ನ್ನು ಆ ನಂತರ ನೋಡಿಕೊಂಡಿದ್ದೇನೆ. ನಮ್ಮ ತಂದೆಗೆ ವಿಭಾಗದಲ್ಲಿ ಬಂದ ಅಸ್ತಿಗಳಲ್ಲಿ ಶಿವಮೊಗ್ಗದಲ್ಲಿ ಯಾವುದೇ ಮನೆ ಕೊಟ್ಟಿಲ್ಲ ಎಂದರೆ ಸರಿ. ನಮ್ಮ ತಂದೆಯ ಕುಟುಂಬದಲ್ಲಿ ರುದ್ರಪ್ಪ ನವರು ದೊಡ್ಡಪವರಾಗಿದ್ದರು. ರುದ್ರಪ್ಪ ಹಾಗೂ ಮಲ್ಲಿಕಾರ್ಜುನಪ್ಪನವರಿಗೆ ಶಿವಮೊಗ್ಗದಲ್ಲಿ ವಾಸದ ಮನೆಕೊಡಲಾಗಿತ್ತು ಎಂದರೆ ಸರಿಯಲ್ಲ. ನಮ್ಮ ತಂದೆ ಗೋಡೋನ್ ಹಾಗೂ ನಿವೇಶನಗಳನ್ನು ಮಾತ್ರ ಕೊಡಲಾಗಿತ್ತು ಎಂದರೆ ಸರಿಯಲ್ಲ. ದಿಃ30/9/1957 ರ ವಿಭಾಗಪತ್ರದಲ್ಲಿ ಅಸೆಸ್ ಮೆಂಟ್ ನಂಃ 314, 342 ಮತ್ತು 443 ರ 45 ಇಂಟು 65 ಅಡಿಯ ಒಂದು ನಿವೇಶನ ಮತ್ತು ಅಮೀರ್ ಅಹಮ್ಮದ್ ಲೇಔಟ್ ನಲ್ಲಿ 80 ಇಂಟು 90 ಅಡಿಯ ಮೂಲೆ ನಿವೇಶನವನ್ನು ವಿಭಾಗದಲ್ಲಿ ಕೊಡಲಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಅದನ್ನು ನಮ್ಮ ತಂದೆ ಖರೀದಿಸಿದ್ದರೆನ್ನುತ್ತಾರೆ. ಈ ಎರಡು ಆಸ್ತಿಗಳು ನಮ್ಮ ತಂದೆಗೆ ಕೊಟ್ಟಿರುವ ಡಿ ಶೆಡ್ಯೂಲ್ ನಲ್ಲಿ ಉಲ್ಲೇಖ ಇರುತ್ತವೆಂದರೆ ಸರಿ.

ನಮ್ಮ ತಂದೆಗೆ 20 ಸಾವಿರ ಹಣವನ್ನು ಮನೆಯ ಬಾಬ್ತು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ವಿಚಾರವನ್ನು ನಿಪಿ1 ರಲ್ಲಿ ಉಲ್ಲೇಖ ಮಾಡಲಾಗಿದೆ ಎಂದರೆ ಸಾಕ್ಷಿದಾರರು ಕೊಡಬೇಕೆಂದು ಉಲ್ಲೇಖ ಇದೆ, ಅ ರೀತಿ ಹಣ ಕೊಟ್ಟಿರಲಿಲ್ಲ ಅನ್ನುತ್ತಾರೆ. ನಮ್ಮ ತಂದೆಯವರು ಬದುಕಿರುವಾಗ ಈ ಹಣದ ಕೊಡದ ಬಗ್ಗೆ ಯಾವುದೇ ಪ್ರಶ್ನೆ ಮಾಡಿಲ್ಲ. 3 ಜನ ಸಹೋದರರು ನಮ್ಮ ತಂದೆಗೆ ವಿಭಾಗ ಪತ್ರದಲ್ಲಿ ತೋರಿಸಿರುವ ಹಣವನ್ನು ಪಾವತಿಸಿದ್ದರು ಎಂದರೆ ಸರಿಯಲ್ಲ. ನಮ್ಮ ದೊಡ್ಡಪ್ಪಂದಿರು ರುದ್ರಪ್ಪ ಹಾಗೂ ಚಂದ್ರಶೇಖರಪ್ಪ ನವರು ಹುಣಸಘಟ್ಟದಲ್ಲಿ ವಾಸವಿದ್ದರೆಂದರೆ ಸರಿ. ಮತ್ತೊಬ್ಬ ದೊಡ್ಡಪ್ಪ ಮಲ್ಲಿಕಾರ್ಜುನಪ್ಪ ಶಿವಮೊಗ್ಗದಲ್ಲಿ ವಾಸವಿದ್ದರು ಎಂದರೆ ಸರಿ. ವಿಭಾಗವಾಗುವ ಮೊದಲು ಹುಣಸಘಟ್ಟದಲ್ಲಿನ ಕುಟುಂಬದ ಆಸ್ತಿಗಳಲ್ಲಿ ರುದ್ರಪ್ಪನವರ ಹೆಸರಿಗೆ ಪವುತಿ ಆಧಾರದ ಮೇಲೆ ಖಾತೆ ಬದಲಾಗಿತ್ತು ಎಂದರೆ ಸರಿಯಲ್ಲ. ನಮ್ಮ ಕುಟುಂಬದವರನ್ನು ಸಾಹುಕಾರ್ ಕುಟುಂಬ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿ ಕೆಲವರು ಹೇಳುತ್ತಿದ್ದರು, ಆದರೆ ದಾಖಲೆ ಇರುವುದಿಲ್ಲ ಅನ್ನುತ್ತಾರೆ. ಪಂಚಾಯ್ತಿ ದಾಖಲೆಗಳಲ್ಲಿ ಸಾಹುಕಾರ್ ರುದ್ರಪ್ಪ ಎಂದು ಉಲ್ಲೇಖ ಇದೆ ಎಂದರೆ ನಾನು ನೋಡಿರುವುದಿಲ್ಲ. ದಾವಾಅಸ್ತಿಯ ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸದರಿ ಆಸ್ತಿಯ ದಕ್ಷಿಣಕ್ಕೆ ಬೇರೆಯವರ ಆಸ್ತಿ ಇರುತ್ತದೆ. ನಮ್ಮ ಆಸ್ತಿಯ ಉತ್ತರಕ್ಕಿರುವ ರಸ್ತೆಯ ದಕ್ಷಿಣಕ್ಕೆ ನಮಗೆ ಸೇರಿರುವ ದನದ ಕೊಟ್ಟಿಗೆ ಇರುತ್ತದೆಂದರೆ ಸರಿಯಲ್ಲ. ದಾವಾಆಸ್ತಿ ಖಾತೆ ನಮ್ಮ ತಂದೆ ಹೆಸರಿಗೆ ಯಾವತ್ತೂ ಬದಲಾಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ 1986 ರವರೆಗೂ ನಮ್ಮ ತಂದೆ ಹೆಸರಿನಲ್ಲಿತ್ತು ಅನ್ನುತ್ತಾರೆ. ನಾನು ಈ ಬಗ್ಗೆ ಕಂದಾಯದ ರಶೀದಿ ಕೊಟ್ಟಿದ್ದೇನೆ. ಅದರ ಬಗ್ಗೆ ಖಾತಾ ಎಕ್ಸ್ ಟ್ರ್ಯಾಕ್ಟ್ ಅಥವಾ ಅಸೆಸ್ ಮೆಂಟ್ ಎಕ್ಸ್ ಟ್ರ್ಯಾಕ್ಟ್ ಇರುವುದಿಲ್ಲ. ಪಂಚಾಯ್ತಿ ವ್ಯವಸ್ಥೆ ಬರುವ ಮೊದಲು ಗಾರಮ ಠಾಣಾ ಬರುವ ಅಸ್ತಿಗಳು ಕಾನೇಶುಮಾರಿ ನಂಬರ್ ಗಳೆಂದು ತಹಶೀಲ್ದಾರ್ ಕಛೇರಿಯಲ್ಲಿ ದಾಖಲೆ ನಿರ್ವಹಣೆ ಮಾಡಲಾಗುತ್ತಿತ್ತು ಎಂದರೆ ಸರಿ.

ನಿಪಿ-1 ದಾವಾಅಸ್ತಿ ಕಾನೇಶುಕುಮಾರಿ ನಂಃ230 ಎಂದು ಮತು ದನಗಳ ಮನೆ ಎಂದು ಉಲ್ಲೇಖ ಇರುತದೆಂದರೆ ಸರಿ. 1963 ರವರಿಗೂ ಸಹ ಸದರಿ ಅಸ್ತಿ ನಿಮ್ಮ ದೊಡ್ಡಪ್ಪ ನವರ ಹೆಸರಿನಲ್ಲಿ ಉಲ್ಲೇಖ ಅಗಿತು ಎಂದರೆ ಸಾಕ್ಷಿ ತಪ್ಪಾಗಿ ಉಲ್ಲೇಖ ಅಗಿತುತ ಅನ್ನುತಾರೆ. ನಿಮ್ಮ ತಂದೆ ವಿಭಾಗವಾದ ನಂತರ ಈ

ಅಸ್ತಿಯ ಖಾತೆ ಬದಲಾವಣೆಗೆ ಅರ್ಜಿ ಕೊಟ್ಟಿದ್ದಾರಾ ಎಂದರೆ ಸಾಕ್ಷಿ ನನ್ನ ಗಮನಕ್ಕೆ ಎಂದೂ ಬಂದಿಲ್ಲ ಅನ್ನುತ್ತಾರೆ. 1980-81 ರಲ್ಲಿ ರುದರಪ್ಪನವರ ಹೆಸರಿನಿಂದ ಚಂದ್ರಶೇಖರಪ್ಪ ನವರ ಹೆಸರಿಗೆ ಖಾತೆ ಬದಲಾಗಿದೆ ಎಂದರೆ ಸಾಕ್ಷಿ ಮೋಸ ಅಗಿದೆ ಅನ್ನುತಾರೆ.1987 ರಲ್ಲಿ ನಮ್ಮ ತಂದೆ ಕಂದಾಯ ಕಟಲು ಹೋದಾಗ ಖಾತೆ ಬದಲಾದ ವಿಚಾರ ಗೊತ್ತಾಗಿರುತ್ತದೆ. ನಮ್ಮ ತಂದೆ ದಾವಾಅಸ್ತಿಯ ಸ್ವಾಧೀನತೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ 1967 ರಲ್ಲಿ ನಮ್ಮ ತಂದೆ ನಮ್ಮ ಅಕ್ಕ ಅಮೇರಿಕಾದಲ್ಲಿದ್ದು, ಅಲ್ಲಿ ಅವರಿಗೆ ಹೃದಯದ ಶಸತರ ಚಿಕಿತಸ ಅಗಿರುತದೆ. ಅ ಸಂದರ್ಭದಲ್ಲಿ ಖಾತೆಯನ್ನು ಚಂದ್ರಶೇಖರಪ್ಪ ನವರು ಬದಲಾಯಿಸಿಕೊಂಡಿದ್ದಾರೆನ್ನುತಾರೆ. ಮೋಸದಿಂದ ಖಾತೆ ಬದಲಾದ ಬಗ್ಗೆ ನಮ್ಮ ತಂದೆ ದಾವಾದಲ್ಲಿ ಹೇಳಿದ್ದಾರೆ. ಅ ರೀತಿ ಯಾವುದೇ ಹೇಳಿಕೆಯನ್ನು ದಾವಾಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ವಿಭಾಗವಾದ ದಿನದಿಂದ ದಾವಾಅಸ್ತಿ 1 ನೇ ಪ್ರತಿವಾದಿಯ ತಂದೆ ಹೆಸರಿನಲ್ಲಿ ಹಕ್ಕುದಾರಿಕೆ ಇರುತ್ತದೆಂದರೆ ಸರಿಯಲ್ಲ. ದಾವಾಅಸ್ತಿ 54 ½ ಇಂಟು 177 ಅಡಿಗಳಷ್ಟು ವಿಸ್ತೀರ್ಣ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಅಸ್ತಿ ಪಶ್ಚಿಮಕ್ಕೆ ಕರೇವೀರಪ್ಪನವರ ಮನೆ, ಪೂವಕ್ಕೆ ಶಿವಲಿಂಗಣ್ಣನವರ ಮರುಳಪ್ಪನವರ ಮನೆ ಇರುತ್ತದೆ. ಸಾಕ್ಷಿ ಮುಂದುವರೆದು ಸದರಿ ಮರುಳಪ್ಪ ಹೆಚ್ ಎಂ ಚಂದ್ರಪ್ಪನವರ ತಂದೆ ಅಗಿದ್ದಾರೆ. ಶಿವಲಿಂಗಣ್ಣನ ಮಗ ಬಸಪ್ಪ ಅಗಿದ್ದು, ಬಸಪ್ಪನ ಮಗ ಮರುಳಪ್ಪ ಅಗಿದ್ದು, ಅವರ ಮಗ ಚಂದ್ರಪ್ಪ ಅಗಿದ್ದಾರೆ. ಸದರಿ ಚಂದ್ರಪ್ಪ ಪ್ರತಿವಾದಿ 2 ರಿಂದ 4 ರವರ ತಂದೆ ಅಗಿದ್ದಾರೆ. ಅವರ ಕುಟುಂಬದವರನ್ನು ಹಳಿಯಲ್ಲಿ ಶಿವಲಿಂಗಣ್ಣನ ಮರಳಣ್ಣನ ಕುಟುಂಬ ಅಂತ ಕರೆಯುತ್ತಾರೆ. ದಾವಾಅಸ್ತಿ ಪೂರ್ವಕ್ಕಿರುವ ಅವರ ಅಸ್ತಿಗೂ ನಮಗೂ ಯಾವುದೇ ಸಂಬಂದ ಇರುವುದಿಲ್ಲ. ನಾನು ಪೂರ್ವಕ್ಕೆ ಶಿವಲಿಂಗಣ್ಣನ ಮರುಳಣ್ಣನ ಮನೆ ಇದೆ, ಪಶಿಮಕ್ಕೆ ಕರೇವೀರಪ್ಪನವ ಮನೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಅ ನಂತರ ಪೂರ್ವಕ್ಕೆ ಇರುವ ವೀರಪ್ಪನವರ ಮನೆ ಹಾಗೂ ಹಿತ್ತಲು ಇರುತ್ತದೆ. ಪಶ್ಚಿಮಕ್ಕೆ ಶಿವಲಿಂಗಣ್ಣನ ಮರುಳಣ್ಣನ ಮನೆ ಇದೆ ಎಂದು ಹೇಳುತ್ತಾರೆ. ನಿಪಿ1 ಅಸ್ತಿತ್ವಕ್ಕೆ ಬರುವ ಮೊದಲಿನಿಂದ ಪಶ್ಚಿಮಕ್ಕೆ ಇರುವ ಶಿವಲಿಂಗಣ್ಣನ ಮರುಳಣ್ಣನ ಮನೆ ಅಸ್ತಿತ್ವದಲ್ಲಿರುತ್ತದೆಂದರೆ ನನಗೆ ಗೊತ್ತಿಲ್ಲ. ನಿಪಿ1 ರಲ್ಲಿ ಇದೇ ಚೆಕ್ಕುಬಂದಿ ಇರುತ್ತದೆ. ಶಿವಲಿಂಗಣ್ಣನ

ಮರುಳಣ್ಣ ನವರ ಮನೆ ಎರಡು ಪೋರ್ಷನ್ ಇರುತ್ತದೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಅವರು ಜಾಗದಲ್ಲಿ ಮನೆ ಕಟ್ಟಿದ್ದಾರೆಂದು ನಮ್ಮ ವಾದವಾಗಿರುತ್ತದೆ. ನಮ್ಮ ಜಾಗದಲ್ಲಿ ಮನೆ ಕಟ್ಟಿದ್ದಾರರೆಂದು ನಮ್ಮ ತಂದೆ ದಾವೆಯಲ್ಲಿ ಹೇಳಿರುವುದಿಲ್ಲ. ದಾವಾಅಸ್ತಿಯಲ್ಲಿ ಕಟ್ಟಿರುವ ಮನೆಯನ್ನು ತುಂಬಾ ದಿನದ ಹಿಂದೆ ನೋಡಿದ್ದು, ಇತ್ತೀಚೆಗೆ ನೋಡಿಲ್ಲ. ನಮ್ಮ ತಂದೆ ಇರುವಾಗ ಅಂದರೆ ಸುಮಾರು 6 ವರ್ಷಗಳ ಹಿಂದೆ ನೋಡಿದ್ದೇನೆ. ದಾವಾಅಸ್ತಿಯಲ್ಲಿರುವ ಮನೆ ಮಂಗಳೂರು ಹೆಂಚಿನ ಹಳೆಯ ಮನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವೆ ದಾಖಲು ಮಾಡಿದ ನಂತರ ತೆಗೆದಿದ್ದಾರೆಂದು ಗೊತ್ತಾಗಿದೆ ಅನುತ್ತಾರೆ. ಆ ವಿಚಾರವನ್ನು ನ್ಯಾಯಾಲಯಕ್ಕೆ ತಿಳಿಸಿರುವುದಿಲ್ಲ. ಕರೇವೀರಪ್ಪ ನವರು ದಾವಾಅಸ್ತಿ ಪೂರ್ವಕ್ಕಿರುವ ಅವರ ಅಸ್ತಿಗೆ ಬೇಲಿ ಹಾಕಿಕೊಂಡಿದ್ದಾರೆಂದರೆ ಇರಬಹುದು. ದಾವಾಅಸ್ತಿ ಪೂರ್ವದಲ್ಲಿ ಓಡಾಡಲು ಯಾವುದೇ ದಾರಿ ಇಲ್ಲ ಎಂದರೆ ಸರಿ. ದಾವಾಅಸ್ತಿ ಪಶ್ಚಿಮಕ್ಕೆ ಇರುವ ಶಿವಲಿಂಗಣ್ಣನ ಮರುಳಣ್ಣ ನವರ ಮನೆ ಮಂಗಳೂರು ಹೆಂಚಿನ ಅಂತಸ್ತಿನ ಮನೆ ಎಂದರೆ ನನಗೆ ಗೊತಿಲ್ಲ. 1956 ರಲ್ಲಿ ಎರಡೂ ಪೋರ್ಷನ್ ಮನೆ ಕಟ್ಟಲಾಗಿರುತ್ತದೆಂದರೆ ಗೊತಿಲ್ಲ.ಈಗ ತೋರಿಸುತ್ತಿರುವ ಭಾವಚಿತ್ರ ಸದರಿ ಮನೆಯ ಭಾವಚಿತ್ರ ಎಂದರೆ ಗೊತಿಲ್ಲ. ಸದರಿ ಮನೆಯ ಮೇಲೆ 1966 ರಲ್ಲಿ ಕಟ್ಟಲಾಗಿದೆ ಎಂದು ಉಲ್ಲೇಖ ಕೂಡಾ ಹಾಕಲಾಗಿದೆ ಗೊತ್ತಿಲ್ಲ. ಸಾಕ್ಷಿ ಆ ಆಸ್ತಿಗೂ ದಾವಾಅಸ್ತಿಗೂ ಸಂಬಂದ ಇಲ್ಲ ಅನ್ನುತಾರೆ. ಈಗ ನನಗೆ ತೋರಿಸುತ್ತಿರುವ ಭಾವಚಿತ್ರ ಗಳು ದಾವಾಆಸ್ತಿಗಳ ಮನೆಯಾಗಿರುತ್ತದೆಂದರೆ ಸರಿ. ಸಾಕ್ಷಿ ಒಪ್ಪಿದ್ದರಿಂದ ಅವುಗಳನ್ನು ನಿಡಿ1 ಮತ್ತು 2 ಎಂದು ಗುರುತಿಸಲಾಯ್ತು. ಸಾಕ್ಷಿ ಇತ್ತೀಚೆಗೆ ಮನೆ ಕೆಡವಲಾಗಿದೆ ಎಂದು ಗೊತ್ತಾಗಿರುತ್ತದೆನ್ನುತ್ತಾರೆ. ಈಗಲೂ ಕೂಡಾ ಸದರಿ ಮನೆ ಅಸ್ತಿತ್ವದಲ್ಲಿದೆ ಎಂದರೆ ಸಾಕ್ಷಿ ಇರಬಹುದು ಅನ್ನುತ್ತಾರೆ. ಈಗ ನನಗೆ ತೋರಿಸುತ್ತಿರುವ ನಿಡಿ-1, 2 ರ ಎಡಬದಿಯಲ್ಲಿ ಎಲೆಕ್ಟ್ರಿಕ್ ಕಂಬದಲ್ಲಿರುವ ಗೋಡೆ ಮನೆಯ ಮಾಳು ಗೋಡೆಯಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಅಲ್ಲಿಂದ ಇರುವ ಪಶ್ಚಿಮಕ್ಕೆ ಇರುವ 6 ಅಡಿ ಜಾಗ ಶಿವಲಿಂಗಣ್ಣನ ಮರುಳಣ್ಣನವರ ಆಸ್ತಿಯಾಗಿರುತ್ತದೆಂದರೆ ಇರಬಹುದು ನನಗೆ ಗೊತ್ತಿಲ್ಲ. ಸದರಿ ಮನೆ ಅಂದರೆ ದಾವಾಅಸ್ತಿ ಮನೆ ಈಗಲೂ ಸಹ ಉಪಯೋಗವಿಲ್ಲದೆ ಪಾಳು ಬಿದ್ದಿರುತ್ತದೆಂದರೆ ಸರಿ. ಹಾಳಾಗುತ್ತಿದ್ದರಿಂದ ಶಿವಲಿಂಗಣ್ಣನ ಮರುಳಣ್ಣ ನವರ ಮನೆ ಯವರು 6 ಅಡಿ

ಗೋಡೆ ಹಾಕಿಕೊಂಡಿದ್ದಾರೆಂದರೆ ಸಾಕ್ಷಿ ಅವರ ಜಾಗದಲ್ಲಿ ಹಾಕಿಕೊಂಡಿದ್ದರೆ ತಕರಾರು ಇಲ್ಲ ಎನ್ನುತ್ತಾರೆ. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ನಮ್ಮ ಅಸ್ತಿ ಪಶ್ಚಿಮಕ್ಕೆ ಇರುವ ಶಿವಲಿಂಗಣ್ಣನ ಮರುಳಣ್ಣ ನವರ ಮನೆ ಕಾಣುತ್ತದೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಭಾವಚಿತ್ರದಲ್ಲಿ ಹೇಳಲು ಸಾಧ್ಯವಿಲ್ಲ ಅನ್ನುತ್ತಾರೆ. ನಾನು ಅಥವಾ ನಮ್ಮ ತಂದೆ ದಾವಾಅಸ್ತಿಯ ಏನು ಆಸ್ತಿಗಳಿರುತ್ತವೆ ಎಂದು ಯಾವತ್ತೂ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆ ಕೇವಲ ಪೂರ್ವ-ಪಶ್ಚಿಮ 24 ½ ಅಡಿ ಇರುತ್ತದೆಂದರೆ ಸರಿಯಲ್ಲ. ಸಾಕ್ಷಿ ಪೂರ್ವ ಪಶ್ಚಿಮ 25 ಅಡಿ ಇರುತ್ತದೆನ್ನುತ್ತಾರೆ. ದಾವಾಆಸ್ತಿ ಪಶ್ಚಿಮಕ್ಕ 24 ½ ಅಡಿ ಮತ್ತು 30 ½ ಅಡಿ ವಿಸ್ತೀರ್ಣದ ಆಸ್ತಿ ಶಿವಲಿಂಗಣ್ಣನ ಮರುಳಣ್ಣ ನವರಿಗೆ ಸೇರಿದ ಆಸ್ತಿ ಇರುತ್ತದೆಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ತೋರಿಸಿರುವ ಪೂರ್ವ ಪಶ್ಚಿಮ 17 ಗಜದ ಅಸ್ತಿ ಬಂದಿರಲಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ತಂದೆ ಹಾಗೂ ಇತರರು 1972 ರಲ್ಲಿ ವಿಭಾಗವಾಗಿದ್ದೇವೆಂದು ದಾವೆಯಲ್ಲಿ ಹೇಳಲಾಗಿದೆ ಎಂದರೆ ಸರಿ. ಆ ಕಾರಣ ನಮ್ಮ ತಂದೆಗೆ ದಾವೆಯನ್ನು ದಾಖಲು ಮಾಡುವ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾಅಸ್ತಿ ನಮ್ಮ ತಂದೆ ಹಿಸ್ಸೆಗೆ ಬಂದಿತ್ತು ಅನ್ನುತ್ತಾರೆ. ನಮ್ಮ ನಡುವೆ ವಿಭಾಗ 1972 ರಲ್ಲಿ ಅದ ನಂತರ ಕೂಡಾ ದಾವಾಆಸ್ತಿ ದಾಖಲೆಗಳನ್ನು ನಮ್ಮ ತಂದೆ ಪರಿಶೀಲಿಸಿರಲಿಲ್ಲ ಎಂದರೆ ಸರಿ. 1972 ರಲ್ಲೂ ಕೂಡಾ ದಾವಾಅಸ್ತಿ ಖಾತೆ ನಮ್ಮ ದೊಡ್ಡಪ್ಪ ರುದ್ರಪ್ಪನವರ ಹೆಸರಿನಲ್ಲಿತ್ತು ಎಂದರೆ ನಾನು ನೋಡಿಲ್ಲ. 54 ½ ಅಡಿಗಳಲ್ಲಿ 30 ½ ಅಡಿ ಭೂಮಿ ಶಿವಲಿಂಗಣ್ಣನ ಮರುಳಪ್ಪನವರ ಕುಟುಂಬಕ್ಕೆ ಸೇರಿದ ಅಸ್ತಿಯಾಗಿರುತ್ತದೆಂದರೆ ಸರಿಯಲ್ಲ. 1957 ರಿಂದ ಚಂದ್ರಶೇಖರಪ್ಪನವರು 24 ½ ಅಡಿ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಪೂರ್ವ-ಪಶ್ಚಿಮ 30 ½ ಅಡಿ ಜಮೀನನ್ನು ಚಂದ್ರಶೇಖರಪ್ಪ ನವರು ಉಮೇಶ್ ರವರ ಹೆಸರಿಗೆ ವಿಲ್ ನಾಮೆ ಮಾಡಿದ್ದಾರೆಂದರೆ ಸಾಕ್ಷಿದಾರರು ಸದರಿ ಆಸ್ತಿ ಅವರ ಕುಟುಂಬಕ್ಕೆ ಎಂದೂ ಸೇರಿರಲಿಲ್ಲ ಅನ್ನುತ್ತಾರೆ. ನಮ್ಮ ತಂದೆ 1986 ರಿಂದ 2006 ರವರೆಗೂ ದಾಖಲೆಗಳನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಒಮ್ಮೆ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಮನವಿ ಸಲ್ಲಿಸಲಾಗಿದೆ ಅನ್ನುತ್ತಾರೆ.

1985 ರಲ್ಲಿ ನಮ್ಮ ತಂದೆ ಖಾತೆ ಬದಲಾವಣೆಗೆ ಅರ್ಜಿ ಕೊಟ್ಟಿದ್ದರು ಎಂದರೆ ದಾಖಲೆ ನೋಡಿ ಹೇಳಬೇಕು. ಕಾನೇಶುಮಾರಿ ನಂಬರ್ 230 ಈಗ ಅಸೆಸ್ ಮೆಂಟ್ ನಂಃ 262 ಎಂದು ಬದಲಾಗಿದೆ ಎಂದರೆ ಸಾಕ್ಷಿದಾರರು 261, 262 ಎಂದು ಬದಲಾಗಿದೆ ಅನ್ನುತ್ತಾರೆ. 261 ಮೊದಲಿನಿಂದಲೂ ಶಿವಲಿಂಗಣ್ಣನ ಮರುಳಣ್ಣ ನವರ ಜಮೀನಾಗಿರುತ್ತದೆಂದರೆ ಸರಿಯಲ್ಲ. 1985 ರಲ್ಲಿ ಮಾತ್ರ ಮೊದಲಿಗೆ ನಮ್ಮ ತಂದೆ ಖಾತೆ ಬದಲಾವಣೆಗೆ ಅರ್ಜಿ ಕೊಟ್ಟಿದ್ದಾರೆಂದರೆ ಸಾಕ್ಷಿದಾರರು ಮೊದಲು ಕೊಟ್ಟಿರಬಹುದು, ನಾವು ಓದುತ್ತಿದ್ದೆವು ಅನ್ನುತ್ತಾರೆ. ಈ ಬಗ್ಗೆ ಪಂಚಾಯ್ತಿ ನೋಟೀಸನ್ನೂ ಕೂಡಾ ಚಂದ್ರಶೇಖರಪ್ಪನವರಿಗೆ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 21/3/1985 ರಂದು ಪಂಚಾಯ್ತಿಗೆ ಉತ್ತರವನ್ನೂ ಕೂಡಾ ಕೊಟ್ಟಿದ್ದಾರೆಂದರೆ ಗೊತ್ತಿಲ್ಲ. ಸಾಕ್ಷಿ ನಮ್ಮ ತಂದೆ ಗಮನಕ್ಕೆ ಬಂದಿಲ್ಲ, ಬಂದಿದ್ದರೆ ಗೊತ್ತಾಗುತ್ತಿತ್ತು ಅನ್ನುತ್ತಾರೆ. ಆ ರೀತಿ ಅರ್ಜಿ ಕೊಡುವಾಗ ಪೂರ್ವ ಪಶ್ಚಿಮ 24 ಅಡಿ ಮಾತ್ರ ಸೇರಿರುತ್ತದೆಂದು ಅರ್ಜಿ ಕೊಟ್ಟಿದ್ದರು ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯ್ತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

*Sd/-*

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.